ಇ) ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 18ರನ್ವಯ ನಿವೇಶನ ರಹಿತ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡದವರಿಗೆ ಉಚಿತವಾಗಿ ಮತ್ತು ನಿವೇಶನ ರಹಿತ ಮಧ್ಯಮ ವರ್ಗದವರಿಗೆ ಸ್ಥಳ ಮೌಲ್ಯ ಪಾವತಿಸಿ ಸರ್ಕಾರಿ ಜಮೀನನ್ನು ನಿವೇಶನಕ್ಕಾಗಿ ಮಂಜೂರು ಮಾಡಲು ಅವಕಾಶವಿರುತ್ತದೆ.

ತಾಲ್ಲೂಕುಗಳು	ಮಂಜೂರುಮಾಡಿದ ನಿವೇಶನಗಳು
ಉಡುಪಿ	ಇಲ್ಲ
ಕುಂದಾಪುರ	88
ಕಾರ್ಕಳ	34

ಲಕ್ಷ್ಮೇಶ್ವರ ಪುರಸಭೆ ಸರಹದ್ದಿನಲ್ಲಿ ಬರುವ ವಾರ್ಡ್ ನಂ.23ಕ್ಕೆ ಸಿಟಿ ಸರ್ವೆ ಆಗದೆ ಇರುವುದರ ಬಗ್ಗೆ.

2517(3187)

ಶ್ರೀ ಗಡ್ಡದೇವರಮಠ ಗಡ್ಡಯ್ಯ ಶಿವಮೂರ್ತಯ್ಯ (ಶಿರಹಟ್ಟಿ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಲಕ್ಷ್ಮೇಶ್ವರ ಪುರಸಭೆ ಸರಹದ್ದಿನಲ್ಲಿ ಬರುವ ವಾರ್ಡ್ ನಂ.23ಕ್ಕೆ (ಮಂಜಲಾಪುರ) ಸಿಟಿ ಸರ್ವೆ ಆಗದೆ ಇಲ್ಲದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇದನ್ನು ಸರ್ವೆ ಮಾಡಿಸಲು ಸರ್ಕಾರ ಕೈಗೊಳ್ಳುವ ಕ್ರಮ ಏನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):

ಅ) ಹೌದು ಈ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರಿಗೆ ನಿರ್ದೇಶನ ನೀಡಲಾಗುವುದು.

ಆಶ್ರಯ ಯೋಜನೆಯಲ್ಲಿ ಫಲಾನುಭವಿಗಳಿಗೆ ಹಣ ಪಾವತಿ ಮಾಡದೇ ಇರುವ ಬಗ್ಗೆ.

2518(2830)

ಶ್ರೀ ಗೋಪಾಲ ಪೂಜಾರಿ.ಕೆ.(ಬೈಂದೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಶ್ರಯ ಯೋಜನೆಯ ಹೆಚ್ಚುವರಿ ಮನೆ 1998-99ನೇ ಸಾಲಿನಲ್ಲಿ ಫಲಾನುಭವಿಗಳಿಗೆ ಹಣ ಪಾವತಿಯಾಗುತ್ತಿಲ್ಲ ಏಕೆ?

ಆ) ಈ ಬಗ್ಗೆ ಜಿಲ್ಲಾಧಿಕಾರಿಯವರು ಉಡುಪಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಯವರು ತಾಲ್ಲೂಕು ಪಂಚಾಯಿತಿ ಇವರು 1998-99ನೇ ಸಾಲಿನ ಆಶ್ರಯ ಹೆಚ್ಚುವರಿ ಮನೆಗಳಿಗೆ ಹಣ ಪಾವತಿ ಮಾಡದಂತೆ ಏಕೆ ಆದೇಶ ಮಾಡಿದ್ದಾರೆ?

ಇ) ಈ ವಿಚಾರದಲ್ಲಿ ಸರ್ಕಾರ ಕೈಗೊಳ್ಳುವ ಕ್ರಮವನ್ನು ತಿಳಿಸುವುದು?

ಶ್ರೀ ಬಿ.ಮರುಳಾ ಇಸ್ಲಾಂ (ವಸತಿ ಸಚಿವರು):

ಅ) 1998-99ನೇ ಸಾಲಿನ ಹೆಚ್ಚುವರಿ ಮನೆಗಳಿಗೆ ಸರ್ಕಾರ ಇಲ್ಲಿಯವರೆಗೆ 3377.25 ಲಕ್ಷ ಸಹಾಯಧನ ಹಾಗೂ 3371.48 ಲಕ್ಷ ಹುಡ್ಕೋ ಸಾಲವನ್ನು ಎಲ್ಲಾ 27 ಜಿಲ್ಲೆಗಳಿಗೂ ಬಿಡುಗಡೆ ಮಾಡಲಾಗಿದೆ.

ಆ) ಯಾವುದೇ ಆದೇಶ ಮಾಡಿರುವುದಿಲ್ಲ.

ಇ) ಪ್ರಶ್ನೆ (ಅ) ಮತ್ತು (ಆ)ನಲ್ಲಿ ನೀಡಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಉಡುಪಿ ಜಿಲ್ಲೆಯಲ್ಲಿ ಅತೀವೃಷ್ಟಿಯಿಂದ ಆದ ಹಾನಿ.

2519(2831)

ಶ್ರೀ ಗೋಪಾಲ ಪೂಜಾರಿ.ಕೆ.(ಬೈಂದೂರು): ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಾದ್ಯಂತ ಅತಿವೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಈ ಅತಿವೃಷ್ಟಿಯಲ್ಲಿ ಭಾಗಶಃ ನಾಶವಾದ ಮನೆಗಳು ಎಷ್ಟು?

ಇ) ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು):